ಹೀರೊಯಿನ್ ಕಟ್ಟಿಕೊಂಡು ತಿರುಗುತ್ತಿದ್ದದ್ದೂ ಸುದ್ದಿ ಆಗಿತ್ತು. ಹುಡುಗೀರನ್ನ ಬಳಸಿಕೊಂಡು ಸರ್ಕಾರದ ಯಾವ ಇಲಾಖೆಯ ಎಂಥ ಕೆಲಸವನ್ನಾದರೂ ಮಾಡಿಸ್ತಿದ್ನಂತೆ. ನನ್ನ ಪೇಷೆಂಟ್ ಒಬ್ಬರು ಅವನ ಕ್ಲೋಸ್ ಫ್ರೆಂಡ್. ಅವನ ಪರಾಕ್ರಮನ ಹೇಳಿಕೊಂಡು, ತಾವು ಆ ಮಟ್ಟಕ್ಕೆ ಏರಲಿಲ್ಲವಲ್ಲ ಅಂತ ಸಂಕಟ ಪಡ್ತಿದ್ರು. ಆಂ, ಆ ನನ್ನ ಪೇಷಂಟಿನ ದೊಡ್ಡ ವ್ಯಾಧಿಯೇ ಅದಾಗಿತ್ತು. ಈಗೀಗ ಸುಧಾರಿಸಿಕೊಳ್ತಿದಾರೆ ಅನ್ನು.'' ಇಬ್ಬರಿಗೂ ಪರಸ್ಪರ ಮಾತು ಮುಗಿದವೆನಿಸಿ ನಾಗರಾಜ ಮೂರ್ತಿ ರೆಸ್ಟ್ ರೂಂ ಕಡೆ ನಡೆದರೆ, ಋಗ್ವೇದಿ ಹೊರಗೆ ಬಂದು ಕಾರಿನ ಕಡೆ ನಡೆದರು.

ಮಧ್ಯಾಹ್ನ ಎರಡು ಗಂಟೆಯಾದ್ದರಿಂದ ಕ್ಲಬ್ಬಿಗೆ ಹೋಗಿ ಊಟ ಮಾಡೋಣವೆಂದುಕೊಂಡು ಕಾರು ಹತ್ತಿ ಆ ದಿಕ್ಕಿಗೆ ಹೊರಟರು ಋಗ್ವೇದಿ. ಒಮ್ಮೆ ಆಸ್ಪತ್ರೆಗೆ ಹೋಗಿ ವೆಂಕಟೇಶ್ ಯಾದವನನ್ನು ಮಾತನಾಡಿಸಿಕೊಂಡು ಬರೋಣವೇ ಎಂಬ ಆಲೋಚನೆ ಬಂದು ಕಾರನ್ನು ಪಕ್ಕಕ್ಕೆ ನಿಲ್ಲಿಸಿ ವೆಂಕಟೇಶ್ ಯಾದವನ ನಂಬರಿಗೆ ಫೋನ್ ಮಾಡಿದ್ದರು. ಸುಮಾರು ಹೊತ್ತು ರಿಂಗಾದ ನಂತರ ಗಂಡಸೊಬ್ಬ ರಿಸೀವ್ ಮಾಡಿದ್ದ. ಋಗ್ವೇದಿ ತಮ್ಮ ಪರಿಚಯವನ್ನು ಹೇಳಿಕೊಂಡಿದ್ದರು. ಆ ಕಡೆಯ ವ್ಯಕ್ತಿ ವೆಂಕಟೇಶ್ ಯಾದವ್ ತಮ್ಮನಂತೆ. ''ಸಾರ್, ಅಣ್ಣ ಐಸಿಯುನಲ್ಲಿದ್ದಾರೆ. ಔಟ್ ಆಫ್ ಡೇಂಜರ್. ನಾಳೆ ಸ್ಕಿನ್‌ಗೆ ಸಂಬಂಧ ಪಟ್ಟಂತೆ ಮೂರು ಗಂಟೆ ಆಪರೇಷನ್ ಮತ್ತು ಟ್ರೀಟ್‌ಮೆಂಟ್ ಇದೆ. ಮಾತನ್ನೂ ಆಡ್ತಿದ್ದಾರೆ. ನಾಡಿದ್ದು ಬನ್ನಿ ಸಾರ್, ಮಾತನಾಡಿಕೊಂಡು ಹೋಗಬಹುದು. ಥ್ಯಾಂಕ್ಸ್ ಫಾರ್ ಕಾಲಿಂಗ್ ಸಾರ್'' ಎಂದು ವಿನಯದಿಂದ ಹೇಳಿ ಫೋನ್ ಕಟ್ ಮಾಡಿದ್ದ. ಕಷ್ಟ ಕಾಲದಲ್ಲಿ ಎಂಥ ಮನುಷ್ಯನಲ್ಲೂ ವಿನಯ ಮತ್ತು ಭಯ ಹುಟ್ಟಿಕೊಳ್ಳುತ್ತದೆ. ಕ್ಲಬ್ ಕಡೆ ಹೊರಟಿದ್ದ ಋಗ್ವೇದಿ ಮನಸ್ಸು ಬದಲಾಯಿಸಿ ವಿಜಯ್ ಮಲ್ಯ ರಸ್ತೆಯ ಕಡೆ ಕಾರು ತಿರುಗಿಸಿದ್ದರು. ಕಾರ್ ಪಾರ್ಕ್ ಮಾಡಿ ಬಿಯರ್ ಕ್ಲಬ್ ಮೆಟ್ಟಿಲು ಹತ್ತಿದ್ದರು. ಸುಮಾರು ಹದಿನೈದು ವರ್ಷಗಳಿಂದಲೂ ಬಿಯರ್ ಕ್ಲಬ್ಬಿಗೆ ತಿಂಗಳಿಗೋ, ಎರಡು ತಿಂಗಳಿಗೋ ಒಮ್ಮೆ ಭೇಟಿ ನೀಡುವುದು ಅಭ್ಯಾಸವಾಗಿಹೋಗಿದೆ. ಅಲ್ಲಿ ವಿವಿಧ ಬಗೆಯ ಡ್ರಾಟ್ ಬಿಯರಿನೊಂದಿಗೆ ಬಟರ್ ಮಿಕ್ಸೆಡ್ ಪೊಟೆಟೊ ಚಿಪ್ಸ್ ತಿನ್ನುವುದು ಋಗ್ವೇದಿಯವರಿಗೆ ಅತ್ಯಂತ ಆನಂದ ಕೊಡುವ ಸಂಗತಿ. ಬಿಯರ್ ಕ್ಲಬ್ಬಿನಲ್ಲಿ ಸುಮಾರು ಎಂಬತ್ತು ಪರ್ಸೆಂಟ್ ಟೇಬಲ್ಲುಗಳಲ್ಲಿ ಹರೆಯದ ಹುಡುಗ ಹುಡುಗಿಯರೇ ಕುಳಿತಿದ್ದರು. ಮೂರು ಮಗ್ ಬಿಯರ್ ಕುಡಿದು, ಒಂದು ಪ್ಲೇಟ್ ಜೀರಾ ರೈಸ್ ತಿಂದು ನಾಲ್ಕೂವರೆ ಗಂಟೆಗೆಲ್ಲ ಮನೆಗೆ ಹಿಂತಿರುಗಿ ಹಾಸಿಗೆಯ ಮೇಲುರುಳಿದ ಋಗ್ವೇದಿ ಏಳು ಗಂಟೆಯವರೆಗೂ ಚನ್ನಾಗಿ ನಿದ್ದೆ ಮಾಡಿದ್ದರು. ಎದ್ದು ಬಿಸಿನೀರಿನಲ್ಲಿ ಕೈಕಾಲು ಮುಖ ತೊಳೆದು ಟೀವಿ ಆನ್ ಮಾಡಿ ಸ್ಟಾರ್ ಟೀವಿ ಚಾನೆಲ್ ಹಾಕಿದ್ದರು. ಆಗ ತಾನೇ 'ಕಾಸ್ಟ್ ಅವೇ' ಸಿನಿಮಾ ಶುರುವಾಗಿತ್ತು. ಅನೇಕ ವರ್ಷಗಳ ಹಿಂದೆ ಆ ಸಿನಿಮಾವನ್ನು ಋಗ್ವೇದಿ ನೋಡಿದ್ದರು. ಹೀರೊ ಟಾಮ್ ಹಾಂಕ್ಸ್ ಅದ್ಭುತವಾಗಿ ನಟಿಸಿದ್ದನಲ್ಲದೆ ಸಿನಿಮಾ ಕತೆ ಅನನ್ಯವಾಗಿತ್ತು. ಸ್ವಲ್ಪ ಡ್ರೈಫ್ರೂಟ್ಸ್ ತಿಂದು, ಹಾಲುಕುಡಿದು ಮಲಗಿದ ಋಗ್ವೇದಿ ಚನ್ನಾಗಿ ನಿದ್ದೆ ಹೋಗಿದ್ದರು.

ಮಾರನೆಯ ಬೆಳಗ್ಗೆ ಹತ್ತು ಗಂಟೆಗೆಲ್ಲಾ ತಿಂಡಿ ಮುಗಿಸಿ ಕಬ್ಬನ್ ಪಾರ್ಕಿನ ಸೆಂಟ್ರಲ್ ಲೈಬ್ರರಿಗೆ ಹೋದರು. ಡಿಗ್ರಿ ಮತ್ತು ಮಾಸ್ಟರ್ ಡಿಗ್ರಿ ಮಾಡುವಾಗ ಸೆಂಟ್ರಲ್ ಲೈಬ್ರರಿಯಲ್ಲಿ ಕೂತು ಗಂಟೆಗಟ್ಟಲೆ ಓದಿದ್ದಿದೆ. ಅಪಾರ ಜ್ಞಾನವನ್ನು ಕೊಟ್ಟಿರುವ ಸೆಂಟ್ರಲ್ ಲೈಬ್ರರಿ ಕಂಡರೆ ಋಗ್ವೇದಿಯವರಿಗೆ ಪ್ರೀತಿ ಮತ್ತು ಗೌರವ. ಹೊಸದಾಗಿ ಓದುವ ವಿದ್ಯಾರ್ಥಿಯಂತೆ ಇಂದು ಸೈನ್ಸ್, ಸೋಷಿಯಲ್ ಸೈನ್ಸಸ್, ಜಿಯೋಗ್ರಫಿ, ಹಿಸ್ಟರಿ, ಫೈನ್ ಆರ್ಟ್ಸ್ ಮುಂತಾದ ಎಲ್ಲಾ ವಿಭಾಗಗಳಲ್ಲೂ ಓಡಾಡಿ ಪುಸ್ತಕಗಳನ್ನು ತಿರುವಿ ಹಾಕಿದ್ದರು. ಸಮಯ ಮಧ್ಯಾಹ್ನ ಎರಡು ಗಂಟೆಯಾಗಿತ್ತು. ನಡೆದುಕೊಂಡೆ ಸೆಂಚುರಿ ಕ್ಲಬ್ ತಲುಪಿದವರು ಲೈಮ್ ಜ್ಯೂಸ್ ಜೊತೆಗೆ ರೋಟಿ ಮಶ್ರೂಮ್ ಮಸಾಲ ಆರ್ಡರ್ ಮಾಡಿದರು.